REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 15 | ISSUE - 6 | MARCH - 2026

# ಭಾರತೀಯ ಸಂಗೀತದಲ್ಲಿ ಕವಲು "ಹಿಂದೂಸ್ತಾನಿ" ಹಾಗೂ "ಕರ್ನಾಟಕೀ" ಪದ್ಧತಿಗಳು

ಪ್ರೊ. ಮೃತ್ಯುಂಜಯ ಅಗಡಿ
ಮುಖ್ಯಸ್ಥರು, ಸ್ನಾತಕೋತ್ತರ ಸಂಗೀತ ಅಧ್ಯಯನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.



ಸಮ್ಯಕ ಗೀತಂ ಇತಿ, ಹಿ ಸಂಗೀತಮ್ ಅಂದರೆ ಚೆನ್ನಾಗಿ ಸೃಜಿಸಿದ ಗೀತವೇ ಸಂಗೀತವು. ಭರತನ "ನಾಟ್ಯಶಾಸ್ತ್ರ" ವೇ ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಆಧಾರವು. ವೈಜ್ಞಾನಿಕ ಸೃಜಿಸಿದ ಸಂಗೀತಕ್ಕೆ ಶಾಸ್ತ್ರೀಯ ಸಂಗೀತವೆಂದು ಕರೆಯಲಾಗುತ್ತದೆ. ಸಂಗೀತವು ಶೃತಿ (pitch), ರಾಗ (melody), ತಾಳ (rythem) ಹಾಗೂ ಲಯ (Tempo) ಇವುಗಳಿಂದ ಸೃಜಿಸಿದ, ಸಮ್ಯಕವಾಗಿ ಸಂಗೀತವಾಗಿದೆ. ಭರತನು ಸ್ವರದ ಸ್ಥಾನವು ಮುಖ್ಯವಾಗಿ, ತಾಲ ಹಾಗೂ ಪದಗಳ ಆಧಾರದ ಮೇಲೆ ಇರುತ್ತದೆ ಎಂದು ಹೇಳಿದ್ದಾನೆ. ಸ್ವರಗಳ ಮೇಲೆ ಸಾಕಷ್ಟು ವಿವರಣೆ ನೀಡಿ, ಸ್ವರಗಳಲ್ಲಿ ಕಂಡು ಬರುವ ಅಂತರವು, ಶೃತಿಗಳ ಅಂತರವನ್ನು ಅವಲಂಬಿಸಿದೆ ಎಂದು ವರ್ಣಿಸಿದ್ದಾನೆ. ಭರತನ ನಂತರ, ಸಾರಂಗದೇವ, ದಾಮೋದರ ಪಂಡಿತ, ಪಾಣಿನಿ, ಅಹೋಬಲ, ಶ್ರೀನಿವಾಸ ಪಂಡಿತ ಲೋಚನ, ವೆಂಕಟಮುಖಿ ಸಂಗೀತಕ್ಕೆ ಶಾಸ್ತ್ರೀಯ ರೂಪನೀಡಿ ಪ್ರಚಾರದಲ್ಲಿ ತಂದಿದ್ದಾರೆ.

ಸುಮಾರು ಹನ್ನೊಂದನೇಯ ಶತಮಾನದಲ್ಲಿ ಯವನರ ದಾಳಿಗೆ, ಉತ್ತರ ಭಾಗ ವಿಶೇಷವಾಗಿ ತುತ್ತಾದ ಪರಿಣಾಮವಾಗಿ, ಭಾರತೀಯ, ಸಂಗೀತ, ಅರಬ, ಪಾರ್ಸಿ ಸಂಸ್ಕೃತಿ ಪ್ರಭಾವದಿಂದ ಉತ್ತರ ಭಾರತದ ಸಂಗೀತ ಹಾಗೂ ಪಾರ್ಸಿ ಸಂಗೀತದ ಕೆಲವು ಅಂಶಗಳನ್ನು ಒಳಗೊಂಡಿತು. ದಕ್ಷಿಣ ಭಾರತದಲ್ಲಿ ಆಕ್ರಮಣದ ಪ್ರಭಾವ ಹೆಚ್ಚಾಗಿ ಇರದೇ ಇದ್ದುದರಿಂದ, ದಕ್ಷಿಣ ಭಾಗದ ಸಂಗೀತದ ಮೇಲೆ ಪ್ರಭಾವ ಆಗಲಿಲ್ಲ. ಉತ್ತರ ಭಾರತದಲ್ಲಿ ಬದಲಾವಣೆ ಹೊಂದಿದ ಸಂಗೀತ "ಉತ್ತರಾದಿ ಸಂಗೀತ' ಇಲ್ಲವೇ "ಹಿಂದೂಸ್ತಾನಿ ಸಂಗೀತ''ವೆಂದು ಗುರುತಿಸಲ್ಪಟ್ಟಿತು. ದಕ್ಷಿಣ ಭಾರತದ ಬದಲಾವಣೆ ಹೊಂದದ ಸಂಗೀತ "ಕರ್ನಾಟಕೀ" ಇಲ್ಲವೇ 'ದಕ್ಷಿಣಾದಿಸಂಗೀತ''ವೆಂದು ಗುರುತಿಸಲಾಗುತ್ತದೆ.

ಸಾಮವೇದದಲ್ಲಿ ಮುಖ್ಯವಾಗಿ ಏಳು ಸ್ವರಗಳ ಸಪ್ತಕ ಬೆಳೆದು ಬಂದಿದೆ. ಗೀತೆ ಪ್ರಬಂಧ ಬಳಕೆಗೆ ಬಂದವು. ಭರತಮುನಿಯ "ನಾಟ್ಯ ಶಾಸ್ತ್ರ"ದಲ್ಲಿ ಹದಿನಾಲ್ಕು ಗೀತೆಗಳು ಉಲ್ಲೇಖಿಸಲ್ಪಟ್ಟಿವೆ. ಪ್ರಬಂಧಗಳು ಧೃವಗಳಿಂದ ಬೆಳೆದು ಬಂದಿತೆಂಬುದು ವೇದ್ಯವಾಗುತ್ತದೆ. ನೃತ್ಯ ಕಲೆ, ನಾಟಕ ಹಾಗೂ ಸಂಗೀತ ಬೆಳೆದು ಬಂದಂತೆ ಪ್ರಬಂಧ ಹಾಗೂ ಧ್ರುವದ ಉಪಯುಕ್ತತೆ ಕಡಿಮೆಯಾದಂತೆ ಕಂಡುಬರುತ್ತದೆ. ಸುಮಾರು ಹದಿಮೂರನೇ ಶತಮಾನದವರೆಗೂ ಪ್ರಬಂಧದ

ಬಳಕೆಯಲ್ಲಿದ್ದಿತು. ಹಿಂದೂಸ್ಥಾನಿ ಹಾಗೂ ಕರ್ನಾಟಕೀ ಪದ್ಧತಿಗಳೆರಡಕ್ಕೂ ಪ್ರಬಂಧವೇ ಅಡಿಪಾಯ. ಎರಡು ಪದ್ಧತಿಯ ಬಂದೀಶಗಳು, ಪ್ರಬಂಧದಲ್ಲಿ ಕಂಡುಬರುತ್ತವೆ. ಬಂದೀಶದ ರಚನೆಯಲ್ಲಿ ಪ್ರಬಂಧದ ಅಂಗಗಳಾದ, ರಾಗ, ತಾಲ, ರಸ ಇವುಗಳೆಲ್ಲವೂ ಅಡಕವಾಗಿದ್ದು ಕಂಡು ಬರುತ್ತದೆ. ಪ್ರಬಂಧದ ದ್ರುವ ಉದ್ ಗ್ರಾಹ, ಬಂದೀಶದ ಸ್ಥಾಯಿ, ಅಂತರಾಳಕ್ಕೆ ಹೋಲಿಸಬಹುದು. ದ್ರುಪದದಲ್ಲಿ ಈ ನಾಲ್ಕು ಭಾಗಗಳನ್ನು ಸ್ಥಾಯೀ, ಅಂತರಾ, ಸಂಚಾರಿ, ಅಭೋಗ ಇವಕ್ಕೆ ಹೋಲಿಸಬಹುದು.

ಮೊಟ್ಟಮೊದಲು ಮಾರ್ಗಿ ಸಂಗೀತ, ನಂತರ ಗ್ರಾಮ ಮೂರ್ಚನಾ, ಉಪರಾಗ, ಜಾತಿಪ್ರಧಾನ, ಪ್ರಾಚೀನ ಸಂಗೀತ, ಪ್ರಣಾಳಿ, ಗ್ರಾಮ, ರಾಗ, ಭಾಷಾ ವಿಭಾಷಾ ಅಂತರ ಭಾಷಾ, ರಾಗಾಂಗ, ಉಪಾಂಗ, ಕ್ರಿಯಾಂಗ ಎಂಬ ಹತ್ತು ಪ್ರಕಾರದ ಉಪಾಂಗ ಕೂಡಿದ ದೇಶಿ ಸಂಗೀತ ಇಲ್ಲಿಂದ ಮುಂದೆ ಏಕರೂಪಾಗಿದ್ದ ಸಂಗೀತ ಪದ್ಧತಿಯಲ್ಲಿ ಉತ್ತರಾದಿ ದಕ್ಷಿಣಾದೀ ಪದ್ಧತಿಗಳು ತಮಗೆ ಕಂಡಂತೆ, ತಮ್ಮ ತಮ್ಮ ರೀತಿಯಲ್ಲಿ ನವೀನ ಅಂಶಗಳನ್ನು ಸೇರಿಸಿಕೊಂಡು, ಭಾರತೀಯ ಸಂಗೀತದ ಮುಖ್ಯ ಪ್ರವಾಹ, ಇಬ್ಬಗೆಯಾಗಿ ಹರಿಯತೊಡಗಿತು. ದಕ್ಷಿಣಾದಿಯವರು, ಮೊದಲಿದ್ದ ಮೂರ್ಚನಾ ಜಾತಿ ಎಂಬ ಅಂಗಗಳಿಂದ ಜನಕಮೇಲ, ಜನ್ಯರಾಗಗಳೆಂದು, ಉತ್ತರಾದಿಯವರು, ಗ್ರಾಮ ರಾಗ, ಉಪರಾಗ ಇತ್ಯಾದಿಗಳಿಂದ ರಾಗ ರಾಗಿಣೀ ವರ್ಗಿಕರಣವೆಂತಲೂ ಸೃಜಿಸಿಕೊಂಡರು. ಹೀಗೆ ಅವರು ಪ್ರತಿಭೆಯ ಮೆರಗು ಕೊಟ್ಟು ಎರಡು ಭಿನ್ನವಾದ ಸಂಗೀತ ಪದ್ಧತಿ ಬೆಳೆಸಿಕೊಂಡು ಬಂದರು. ಎರಡೂ ಪದ್ಧತಿಯಲ್ಲಿಯ ಸಾಮ್ಯ ಕೆಳಗಿನಂತೆ ಗುರುತಿಸಬಹುದಾಗಿದೆ. ಸಂಗೀತರ ಕಲ್ಪನೆಯಲ್ಲಿ ಓಂಕಾರ ನಾದವೇ, ಸಂಗೀತದ ಉತ್ಪತ್ತಿ ನಕಾರಯುಕ್ತ ಪ್ರಾಣದ ಕಾರಯುಕ್ತ ಅಗ್ನಿಯ ಸಮ್ಮಿಲನದಿಂದ ಸ್ಪಂದನದಿಂದ ನಾದೋತ್ಪತ್ತಿ. ಅಹತ ಹಾಗೂ ಅನಾಹತ ಸೂಕ್ಷ್ಮವಾದ, ಅಹತ ಸಂಗೀತ ಉಪಯೋಗಿ, ಕಂಪನ ಸಂಖ್ಯೆಗಳ ಅನುಸಾರವಾಗಿ ನಾದದ ತೀವ್ರತೆ ಹೆಚ್ಚುತ್ತದೆ. ಮುಖ್ಯ ಸ್ವರಗಳು ಏಳು. ಸ ಹಾಗೂ ಪ ಅಚಲ, ಉಳಿದವುಗಳು ವಿಕೃತ ಹನ್ನೆರಡು ಸ್ವರಸಮೂಹದಿಂದ "ಥಾಟ" ಅಥವಾ "ಮೇಲ' ಉತ್ಪನ್ನ. ಇನ್ನು ವೈಷಮ್ಯಗಳನ್ನು ಬಹು ವಿಧವಾಗಿ ಕಂಡುಕೊಳ್ಳಬಹುದು.

ದಕ್ಷಿಣಾದಿಯಲ್ಲಿ ಎಪ್ಪತ್ತೆರಡು ಮೇಲಗಳು, ಉಪಯೋಗದಲ್ಲಿ ಹತ್ತೊಂಬತ್ತು ಹಿಂದೂಸ್ಥಾನಿ ಪದ್ಧತಿಯಲ್ಲಿ ಮೂವತ್ತೆರಡು, ಉಪಯೋಗದಲ್ಲಿ ಹತ್ತು ಥಾಟುಗಳು ಮಾತ್ರ.

1. ಗೀತದ ಭಾಷೆಗಳು ಕರ್ನಾಟಕೀ ಸಂಗೀತದಲ್ಲಿ, ತಮಿಳು, ತೆಲಗು, ಕನ್ನಡ, ಹಿಂದೂಸ್ತಾನೀ ಸಂಗೀತ ಪದ್ಧತಿಯಲ್ಲಿ ಹಿಂದಿ, ಬ್ರಜ್, ಉರ್ದು ಇತ್ಯಾದಿ.
2. ಹೆಚ್ಚು ಕಂಪನ ಹಿಂದೂಸ್ತಾನಿಯಲ್ಲಿ ಸ್ಥಿರತೆ ಹೆಚ್ಚು.
   ಕರ್ನಾಟಕೀಯದಲ್ಲಿ ಒಂದೇ ಹೆಸರಿನ ತಾಳದಲ್ಲಿ ಅಂಶಭೇದಗಳಿವೆ. ಹಿಂದೂಸ್ಥಾನಿಯಲ್ಲಿ ಇಲ್ಲ.
3. ಕರ್ನಾಟಕೀ ಸಂಗೀತದಲ್ಲಿ ಶುದ್ಧ ಮೇಲ ಕನಾಂಗಿಯಾದರೆ, ಹಿಂದೂಸ್ಥಾನಿಯಲ್ಲಿ ಬಿಲಾವಲ್ ಶುದ್ಧ ಥಾಟುರಾಗವು.
4. ಹಿಂದೂಸ್ಥಾನಿ ಪದ್ಧತಿ ಥಾಟುಗಳಲ್ಲಿ ಒಂದೇ ಸ್ವರದ ಎರಡು ರೂಪಗಳನ್ನು ಉಪಯೋಗಿಸುವುದಿಲ್ಲಾ
5. ಕರ್ನಾಟಕೀ ಸಂಗೀತದಲ್ಲಿ ಮೃದಂಗ ವಾದನ, ಹಿಂದೂಸ್ಥಾನಿಯಲ್ಲಿ ತಬಲಾ ವಾದನ.
6. ಪ್ರಬಂಧ, ಸಾಹಿತ್ಯ ಅಕ್ಷರಗಳ ಬಂದೀಶ (ಆಯಾ ಸ್ವರಗಳಿಗೆ ಅದೇ

ಅಕ್ಷರಗಳು, ಅದೇ ಮಾತ್ರಗಳು).

7. ಶುದ್ಧತೆಗೆ ಕರ್ನಾಟಕೀ ಸಂಗೀತದಲ್ಲಿ ಹೆಚ್ಚು ಗಮನ ಕೊಡಲಾಗುತ್ತದೆ.

8. ಹಿಂದೂಸ್ಥಾನಿ ಸಂಗೀತದಲ್ಲಿ ಸಂಗೀತಗಾರ ಅಥವಾ ವಾದಕನಿಗೆ ಪ್ರಾಮುಖ್ಯತೆ, ಹಿಮ್ಮೇಳದವರಿಗೆ ಪ್ರಾಧಾನ್ಯವಿಲ್ಲಾ.

ಹಿಂದೂಸ್ತಾನಿ ಸಂಗೀತದ ಪದ್ಧತಿಯಲ್ಲಿ, ಪ್ರಯೋಗಾತ್ಮಕವಾಗಿ ಆಲಾಪವು ವಿಶೇಷ ಸ್ಥಾನ ಪಡೆದಿರುತ್ತದೆ. ರಾಗದ ಆಲಾಪವು ವಿವಿಧ ಲಯಗಳಲ್ಲಿ ನಡೆಯುತ್ತದೆ. ಹದಿಮೂರು ಅಥವಾ ಹದಿನೈದನೇ ಶತಮಾನದಲ್ಲಿ ಆವಿಷ್ಕಾರ ಹೊಂದಿದ ಧ್ರುಪದ ಗಾಯನದ ಹುಟ್ಟಿನ ಬಗ್ಗೆ ನಿಖರವಾಗಿ ಗೊತ್ತಿಲ್ಲ. ಈ ಗಾಯನದ ಶೈಲಿಯು ಅತೀ ಕಟ್ಟು ನಿಟ್ಟಾದ ನಿಯಮ, ನಿಷ್ಠೆ, ಸಂವಿಧಾನ ಸರಣಿಯು ಅನುಸರಿಸಲ್ಪಡುತ್ತಿದ್ದು, ಆಯಾ ರಾಗದ ಸ್ವರ, ತಾಲ, ಲಯ ಕರಾರುವಕ್ಕಾಗಿ ಪಾಲಿಸಲ್ಪಡುತ್ತದೆ. ಇದು ಲೆಕ್ಕಾಚಾರದ ಸಂಗತಿ. ತಾನು ವೈಖರಿ, ವಿನ್ಯಾಸಗಳಿಗೆ ಆಸ್ಪದವಿಲ್ಲ. ಧ್ರುಪದ ಗಾಯನದಲ್ಲಿ ಸ್ಥಾಯಿ, ಅಂತರಾ, ಸಂಚಾರಿ ಹಾಗೂ ಅಭೂಗಿ ಎಂದು ನಾಲ್ಕು ಹಂತಗಳಿವೆ. ಈ ಗಾಯನ ವೀರ, ಶೃಂಗಾರ, ಶಾಂತ ಹಾಗೂ ಭಕ್ತಿರಸ ಪ್ರಧಾನವಾಗಿದೆ. ಇದು ವಿಶೇಷವಾಗಿ ಚೌತಾಲದಲ್ಲಿ ಹಾಡಲ್ಪಡುತ್ತದೆ. ಧ್ರುಪದ ಗಾಯಕರಿಗೆ, ಕಲಾವಂತರೆಂದು ಮನ್ನಿಸುತ್ತಿದ್ದರು. ಈ ಕಲಾವಂತರ ವಾಣಿ ವೈಖರಿಗನುಸರಿಸಿ ಶೈಲಿಯನ್ನು ಗೊಬರವಾಣಿ, ಡಾಗೂರವಾಣಿ ಖಂಡಾರವಾಣಿ ಹಾಗೂ ನುಹರವಾಣಿ ಎಂದು ವಿಭಜಿಸಿದ್ದಾರೆ. ಧಮಾರವು ಕೂಡಾ ಹಿಂದೂಸ್ಥಾನೀ ಸಂಗೀತದ ಒಂದು ಶೈಲಿ. ಧಮಾರ ತಾಲದ ಚೌಕಟ್ಟಿನಲ್ಲಿ ಹೋರಿ ಸಂಗೀತವು ರೂಪಗೊಳ್ಳುತ್ತದೆ. ಇದು ತಾಲ, ಲಯದಲ್ಲಿ ಧ್ರುಪದ ಗಾಯನ ಹೋಲುತ್ತದೆ. ಧಮಾರ ಶೈಲಿಯು ಹದಿನೆಂಟನೆಯ ಶತಮಾನದ ಅಂತ್ಯದವರೆಗೂ ಜನಪ್ರಿಯವಾಗಿತ್ತು. ಶಾಸ್ತ್ರದ ಅತೀ ನಿಯಮ ಕಟ್ಟುನಿಟ್ಟಾದ ಕ್ರಿಯೆಗಳಿಂದ ಸಂಗೀತದಲ್ಲಿ ರಸಾನುಭವದ ಅನುಭವಕ್ಕೆ ಅವಕಾಶ ಸಿಗದೇ, ಧ್ರುಪದ, ಧಮಾರಗಳೆರಡು ನೀರಸವಾದ ಶೈಲಿ ಎಂದು ಪರಿಗಣಿಸಲ್ಪಟ್ಟವು. "ಖ್ಯಾಲ'' ಎಂಬ ಹೊಸ ಶೈಲಿಯ ಆವಿಷ್ಕಾರದೊಂದಿಗೆ ಇವುಗಳ ಜನಪ್ರಿಯತೆ ಕಡಿಮೆ ಆಯಿತು. ಪಾರ್ಸಿ ಭಾಷೆಯಲ್ಲಿ" ಖಯ್ಯಾಲ್' ಶಬ್ದದ ಅರ್ಥ ಕಲ್ಪನೆ. ಈ ಶೈಲಿಯಲ್ಲಿ ತಮ್ಮ ಕಲ್ಪನಾ ವೈಖರಿಯನ್ನು ಬೆಳಗಿಸಲು ಕಲಾಕಾರನಿಗೆ ಸಾಕಷ್ಟು ಅವಕಾಶಗಳಿವೆ. ಇದು ಶೃಂಗಾರ ರಸ ಪ್ರಧಾನವಾಗಿದ್ದು ಏಕತಾಳ, ತ್ರಿತಾಳ ಮುಂತಾದ ತಾಳಗಳಲ್ಲಿ ಪ್ರಸ್ತುತ ಪಡಿಸಲ್ಪಡುತ್ತವೆ. ಖ್ಯಾಲ ಗಾಯನಕ್ಕೆ ಧ್ರುಪದ ಗಾಯನವೇ ಅಡಿಗಲ್ಲಾ ಖ್ಯಾಲಗಾಯಕಿಯು ಅಮೀರಖುಸು, ಇವರಿಂದ ಆವಿಷ್ಕಾರ ಮೊದಲು, ನಂತರ ಜೈನಪುರದ ಹುಸೇನ ಶರ್ಕಿ ಎಂಬುವವರಿಂದ ಅದರ ನಂತರ ವಿಕಸತೆ ಎಂಬುದು ಸಾಮಾನ್ಯ ಅಭಿಪ್ರಾಯ ಖಯ್ಯಾಲಶೈಲಿ''ಛೋಟಾ' ಹಾಗೂ "ಬಡಾ" ಎಂಬ ಎರಡು ವಿಧಗಳನ್ನು ಒಳಗೊಂಡಿದೆ.

ರುಮಿ, ಟಿಪ್ಪಾ, ಭಾವನಾ ಪ್ರಧಾನವಾಗಿದ್ದು ಲಘುಗಾಯನ ಶೈಲಿಗಳಾಗಿವೆ. ಈ ಶೈಲಿಗಳು ಅಪರೂಪವಾಗಿ ಕೇಳಿಬರುತ್ತವೆ. ಹಿಂದೂಸ್ತಾನಿ ಸಂಗೀತದ ಇತರ ಶೈಲಿಗಳಾದ ಲಕ್ಷಣ ಗೀತ, ಕವ್ವಾಲಿ, ಭಾವಗೀತೆಗಳು ಕೂಡಾ ತುಂಬಾ ಜನಪ್ರಿಯ ಸಂಗೀತ ಶೈಲಿಗಳು, ಖ್ಯಾಲ ಗಾಯಕಿ, ವಿಲಂಬತ್, ಮಧ್ಯ ಹಾಗೂ ದೃತ್ ಲಯಗಳಲ್ಲಿ ನಡೆಯುತ್ತದೆ. ಪ್ರಾರಂಭದಲ್ಲಿ ತಾಳವಿಲ್ಲದೇ ಆಲಾಪವಿರುತ್ತದೆ. ನಂತರ ಆಯಾ ಲಯಗಳಿಗೆ ಹೊಂದಿ, ಕ್ರಮಾನುಸಾರ ಮುಕ್ತಾಯಗೊಳ್ಳುತ್ತದೆ.

ಧ್ರುಪದ ಗಾಯನ ಶೈಲಿಯು, ಸಾಧಾರಣವಾಗಿ ಮೊದಲು ಸಂಸ್ಕೃತ ಭಾಷೆಯಲ್ಲಿದ್ದು ನಂತರ ಹಿಂದಿ, ಉರ್ದು ಭಾಷೆಗಳಲ್ಲಿ ಪ್ರಚಾರಪಡಿಸಲಾಗುತ್ತಿತ್ತು. ಈ ಗಾಯನ ಶೈಲಿಯು ಪೌರುಷಯುಕ್ತ ಪ್ರಭಾವಶಾಲಿ ಗಂಟಲು ಹೊಂದಿದ

ಸಂಗೀತಗಾರರಿಗೆ ಸರಿಹೊಂದುತ್ತದೆ. ಈ ಶೈಲಿ ಅತೀ ಕಟ್ಟುನಿಟ್ಟಾದ ಪದ್ಧತಿ. ಆಯಾ ರಾಗದ ಸ್ವರ, ತಾಲ, ಲಯ ಕರಾರುವಕ್ಕಾಗಿ ಖಚಿತವಾಗಿ ಪರಿಪಾಲಿಸಲ್ಪಡುತ್ತದೆ. ಈ ಗಾಯನ ಶೈಲಿಯ ನಿಯಮ ನಿಬಂಧನೆಗಳೆಂದರೆ ಸೈನ್ಯಾಧಿಕಾರಿಯ ಆಜ್ಞೆ ಇದ್ದಂತೆ. ದೃಪದ ಗಾಯನ ಅಲಂಕಾರ, ವರ್ಣವೈಖರಿ, ಸ್ವರವಿನ್ಯಾಸ, ವರ್ಣರಂಜಿತ ತಾನುಗಳಿಂದ ವರ್ಜಿತವಿದೆ. ಇಲ್ಲಿ ಗಮಕ, ಬೂಲತಾನ, ಲಯದ ದುಗುಣ, ತಿಗುಣ, ಚೌಗುಣ ಮುಂತಾದ ವೈವಿಧ್ಯಗಳಲ್ಲಿಯ ಲಯದ ಲೆಕ್ಕಾಚಾರ ಒಳಗೊಂಡಿರುತ್ತದೆ. ದ್ರುಪದ ಗಾಯನದಲ್ಲಿ ಸ್ಥಾಯಿ, ಅಂತರಾ ಸಂಚಾರಿ, ಹಾಗೂ ಅಭೂಗಿ ಎಂಬ ನಾಲ್ಕು ಹಂತಗಳಿವೆ. ಪಖಾವಜವು ದೃಪದದಲ್ಲಿ ಉಪಯೋಗಿಸಲ್ಪಡುತ್ತದೆ. ಇಂದಿನ ದಿನಗಳಲ್ಲಿ ದ್ರುಪದ ತಬಲಾದೊಂದಿಗೆ ಪ್ರಸ್ತುತಪಡಿಸುವುದನ್ನು ಕಾಣಬಹುದಾಗಿದೆ.

ದ್ರುಪದ ಗಾಯನ ಶೈಲಿಯು ನೊಂ. ತೊಂ ದಿಂದ ಪ್ರಾರಂಭಗೊಳ್ಳುತ್ತದೆ. ಇದರ ಆಲಾಪದಲ್ಲಿ ನಾಲ್ಕು ಹಂತಗಳಿದ್ದು, ಆಲಾಪ ಗತಿಯು ಮೂರನೇಯ ಹಂತದಿಂದ ತ್ವರಿತಗೊಂಡು ಗಮಕ ಅಂಗವು ಪ್ರಾರಂಭಗೊಳ್ಳುತ್ತದೆ. ಇಲ್ಲಿ ಮೀಂಡ ಪ್ರಭಾವ ಹೆಚ್ಚಾಗಿರುತ್ತದೆ. ನಂತರ ದ್ರುಪದ ಗೀತದ ಪ್ರಮುಖ, ಮತ್ತು ಅರ್ಥಪೂರ್ಣ ಶಬ್ದಗಳನ್ನು ಭಿನ್, ಭಿನ್ ಲಯಕಾರದಲ್ಲಿ ಪದಚ್ಛೇದಮಾಡಿ ರಾಗದ ರಸಭಾವವನ್ನು ವ್ಯಕ್ತಪಡಿಸುವ ಈ ಗಾಯನ ಶೈಲಿಯಲ್ಲಿ ಲಯಕಾರಿಗೆ ವಿಶೇಷ ಸ್ಥಾನಮಾನವಿದೆ.

ದ್ರುಪದ ಗಾಯನ ಶೈಲಿಯಲ್ಲಿ ನಾಲ್ಕು ವಾಣಿ ಅಥವಾ ಬಾನಿಗಳಿವೆ. ಇವುಗಳ ವಿವರಣೆ "ಮಾದಮುಲ್ ಮಾಸುಕೆ' ಗ್ರಂಥದಲ್ಲಿ ವರ್ಣಿಸಲಾಗಿದೆ. "ಗೋಬರವಾಣಿ" ತಾನಸೇನರಿಂದ ಪ್ರಚಾರದಲ್ಲಿ ಬಂದಿದೆ. ಈ ವಾಣಿ ಪ್ರಸನ್ನಾತ್ಮಕವಾಗಿದ್ದು ಧೀರಗತಿಯುಳ್ಳದ್ದಾಗಿದೆ. ಶಾಂತರಸಭಾವ ಪ್ರತಿಪಾದಿಸುತ್ತದೆ. ಸ್ವರಗಳ ಸುಸ್ಪಷ್ಟತೆ ಈ ವಾಣಿಯ ವೈಶಿಷ್ಟ್ಯವಾಗಿದೆ. "ಖಂಡಾರ ವಾಣಿ'" ಸುಪ್ರಸಿದ್ಧ ವೀಣಾವಾದಕ "ಸಮೂಹಸಿಂಹ'' ಇವರಿಂದ ಪ್ರಚಾರದಲ್ಲಿ ಬಂದಿದೆ. ಇವರು ಖಂಡಾರ ಗ್ರಾಮದ ನಿವಾಸಿಯಾದುದರಿಂದ ಅದಕ್ಕೆ ಖಂಡಾರ ವಾಣಿಯೆಂದು ಕರೆಯಲಾಗಿದೆ. ಈ ವಾಣಿಯು ವಿಲಾಸಪೂರ್ಣವಾದದ್ದು ಶ್ರೀಮಂತಿಕೆಯ ಆಡಂಬರಗಳಿಂದ ಕೂಡಿ, ತೀವ್ರ ಭಾವ ರಸೂದ್ದೀಪಕವಾಗಿದೆ. "ಡಾಗೂರವಾಣಿ" ಬಹಳ ಸರಳ ಮತ್ತು ಲಾಲಿತ್ಯ ಪೂರ್ಣವಾಗಿದ್ದು, ಸಹಜ ಗತಿಯಲ್ಲಿ ವಿಕಸಿತಗೊಳ್ಳುತ್ತದೆ. ಬ್ರಿಜಚಂದ ಇದರ ಪ್ರಸಾರ ಮಾಡಿದ್ದು, ಇವರು ಡಾಗೂರ ಗ್ರಾಮದವರಾಗಿದ್ದರಿಂದ, ಇವರ ವಾಣಿಯನ್ನು "ಡಾಗೂರವಾಣಿಯೆಂದು'' ಹೆಸರಿಸಲಾಗಿದೆ. ನೂಹರ ಗ್ರಾಮದ ಶ್ರೀ ಚಂದ ರಜಪೂತ ಇವರು ಆವಿಷ್ಕಾರಮಾಡಿ ಪ್ರಚಾರದಲ್ಲಿ ತಂದ ಶೈಲಿಗೆ "ನೂಹರ ವಾಣಿ'' ಎಂದು ಪರಿಚಯವಾಗಿದೆ. ಈ ಪದ್ಧತಿಯಲ್ಲಿ ಒಂದು ಸ್ವರದಿಂದ ಎರಡು, ಮೂರು ಸ್ವರಗಳ ಉಲ್ಲಂಘನೆ ಮಾಡಿ ಪರಿವರ್ತಿತ ಸ್ವರಕ್ಕೆ ಮುಟ್ಟುವುದೇ ಇದರ ಪ್ರಮುಖ ಲಕ್ಷಣ.

ಖ್ಯಾಲ ಪದ್ಧತಿ ಹದಿನೈದನೇಯ ಶತಮಾನದಲ್ಲಿ, ಜೈನಪುರದ ಸುಲ್ತಾನ ಹುಸ್ಸೇನ ಶರ್ಕಿ ಅವರಿಂದ ಪರಿಷ್ಕರಿಸಿ, ಪ್ರಚಾರದಲ್ಲಿ ಬಂದಿದೆ. "ಸದಾರಂಗ, ಮನರಂಗ, ಕದರಪಿಯಾ, ಇವರು ತಮ್ಮ ಕ್ರೀಯಾತ್ಮಕ ರಚನೆಗಳಿಂದ ಈ ಪದ್ದತಿಗೆ ಪರಿಪಕ್ವತೆ ತಂದು ಕೊಟ್ಟರೆಂದು ಹೇಳಿಕೆ ಇದೆ. ರಂಜನೀಯವಾದಂಥ ಸ್ವರ ವೈಚಿತ್ರತೆಯಿಂದ ಒಡಗೂಡಿದ, ರಾಗ ಕಲ್ಪನಾ ವೈಖರಿಯು ಪ್ರಧಾನ ಲಕ್ಷಣವಾದ್ದರಿಂದ, ಶಬ್ದ ಸಾಹಿತ್ಯ ಅನಿವಾರ್ಯವಾದರೂ, ಶಬ್ದಪ್ರಧಾನವಲ್ಲ ಎಂದು ಎನ್ನಲು ಅಡ್ಡಿಯಿಲ್ಲಾ. ಈ ಖ್ಯಾಲ ಶೈಲಿಯಲ್ಲಿ "ವಿಲಂಬಿತ್ ಖ್ಯಾಲ" "ದ್ರುತಖ್ಯಾಲ" ಎಂಬ ಎರಡು ಪ್ರಭೇದಗಳಿವೆ. ದೃತ್ ಖ್ಯಾಲ, ಇದು ಹದಿನಾಲ್ಕನೇಯ ಶತಮಾನದಲ್ಲಿ ಅಮೀರಖುಸ್ರು ಇವರಿಂದ ಕವ್ವಾಲಿ ಆಧಾರದ ಮೇಲೆ ಆವಿಷ್ಕಾರವಾಯಿತು, ಎಂಬುದು ಕೆಲವರ ಅಭಿಪ್ರಾಯ. ಈ ಪದ್ಧತಿಯಲ್ಲಿ

ಗಾಯನ ಪ್ರಾರಂಭವಾದ ನಂತರ, ತಾಳದ ಚೌಕಟ್ಟಿನಲ್ಲಿ ಒಂದೊಂದು ಶಬ್ದವನ್ನು ಅನೇಕ ಪ್ರಕಾರವಾಗಿ ಆಲಾಪನೆ ಮಾಡುವುದು ತದಂಗವಾಗಿ ರಾಗನಿಯಮಕ್ಕೆ ಒಳಪಟ್ಟು, ರಾಗದ ಸ್ವರಗಳನ್ನು ವಿವಿಧ ಬಗೆಯಾಗಿ ಆಲಾಪಿಸುವುದಕ್ಕೂ ಇಲ್ಲಿ ಸ್ವಾತಂತ್ರವಿದೆ. ದ್ರುಪದ ಪದ್ದತಿಯಂತೆ ಮೊದಲು ರಾಗಾಲಾಪವಿರುವುದಿಲ್ಲ. ಆಲಾಪ ನೊಂ, ತೊಂ ಇಲ್ಲವೇ ಅ, ಈ, ಊ, ಎ, ಐ ಕಾರಗಳಲ್ಲಿ ಮಾಡುತ್ತಾರೆ. ಈ ಖ್ಯಾಲ ರಚನೆಯಲ್ಲಿ ಸ್ಥಾಯಿ, ಅಂತರಾ ಎರಡೇ ಭಾಗಗಳಿದ್ದು ಆಯಾ ರಚನೆಗಳ ಶಬ್ದ ಸಮೂಹ, ನಡು ನಡುವೆ ಆಲಾಪಕ್ಕನುಸರಿಸಿ ಕಡಿಮೆ ಇರುತ್ತವೆ. ತಾಳದ ಚೌಕಟ್ಟಿನಲ್ಲಿಯೇ ಗಾಯನಸೌಂದರ್ಯ ಸಾಧನಗಳಾದ ವಿವಿಧ ತಾನುಗಳನ್ನು, ಗಮಕಗಳನ್ನು, ಮಿಂಡ ಬೋಲತಾನ, ಸ್ವರಾಲಂಕಾರಗಳನ್ನು ಬೆಳೆಸಿಕೊಳ್ಳಲು, ಇಲ್ಲಿ ವಿಶೇಷ ಅವಕಾಶಗಳಿವೆ. ಇಂತಹ ಖ್ಯಾಲ ರಚನೆಗಳು, ತ್ರಿಕಾಲ, ಝುಮ್ರಾ, ತಿಲವಾಡ, ಏಕತಾಳ, ಅಡಾಚೌ ತಾಲ ಮುಂತಾದ ತಾಲಗಳಲ್ಲಿ ಹಾಡುತ್ತಾರೆ. ವಿಲಂಬಿತ ಲಯದಲ್ಲಿ ಖ್ಯಾಲ ಗಾಯಕಿಗೂ, ಝುಪತಾಳ, ತ್ರಿತಾಳ, ದೃತ್, ಏಕತಾಳ ಇತ್ಯಾದಿ ತಾಲಗಳಲ್ಲಿ, ಮದ್ಯಲಯದಲ್ಲಿ ದೃತ್ ಖ್ಯಾಲಗಳನ್ನು ಹಾಡುತ್ತಾರೆ. ವಿಲಂಬಿತ ಲಯದ, ವಿಲಂಬಿತ ಖ್ಯಾಲದಲ್ಲಿ ಸುಂದರ ಭಾವರಾಗ ನಿರೂಪಣೆ, ತಾಲ ಬೂಲತಾನಿನ ಸ್ವರ ಮಾಧುರ್ಯ ಕಾಣಬಹುದು. ಮಧ್ಯಲಯದ ಧೃತ್ ಖ್ಯಾಲದಲ್ಲಿ ವೇಗಗತಿಯ ರಾಗ ನಿರೂಪಣೆ, ಚಮತ್ಕಾರಿಕಲಯ ಪ್ರಕಾರದೊಂದಿಗೆ, ರಾಗ, ಸ್ವರೋಚ್ಚಾರ, ತಾನ, ಬೊಲತಾನ ವೇಗಗತಿಗಳ ಚಪಲತೆಯನ್ನು ಕಾಣಬಹುದಾಗಿದೆ. ತಾಲ ವಾದನಕ್ಕೆ ತಬಲಾ ಉಪಯೋಗ ಈ ಪದ್ಧತಿಯ ಸಂಪ್ರದಾಯ. ಖ್ಯಾಲ ಪದ್ಧತಿಯು ಇಂದಿನ ಸಂಗೀತದಲ್ಲಿ, ಪ್ರಮುಖ ಸ್ಥಾನ ಪಡೆದಿದ್ದು ಖ್ಯಾಲ ಪದ್ದತಿ ಕಲಿತರೆ, ಸಂಗೀತಗಾರನಾದ ಎನ್ನುವಷ್ಟು ಪ್ರಚಲಿತವಿದೆ.

## ಗ್ರಂಥಋಣ :


1. ಎಚ್. ತಿಪ್ಪೇರುದ್ರಸ್ವಾಮಿ : ತೌಲನಿಕ ಕಾವ್ಯ ಮೀಮಾಂಸೆ
2. Wimsatta Brooks : Literary Critictism a short History.
3. ಆಚಾರ್ಯ ಬೃಹ್ಮಸ್ಪತಿ : ಸಂಗೀತ ಚಿಂತಾಮಣಿ
4. ಎಸ್.ಕೆ. ರಾಮಚಂದ್ರರಾವ : ಸಂಗೀತ ಇತಿಹಾಸ ಪರಂಪರೆ
5. Macadonal edition : Music and Dancing
6. ಬಿ.ಡಿ.ಪಾಠಕ : ಭಾರತೀಯ ಸಂಗೀತ ಚರಿತ್ರೆ
7. Satguru Publications : Encyclopedia of Indian Music with Special refer ence to rangs.
8. ಶ್ರೀರಂಗ : ನಾಟ್ಯಶಾಸ್ತ್ರದ ಅಧ್ಯಾಯ ಸಂಗ್ರಹ
9. ಸಂಗೀತ ಕಾರ್ಯಾಲಯ ಹಾಥರಸ : ಘರಾಣಾ ಅಂಕ ೧೯೮೪ ಜನೇವರಿ ಫೆಬ್ರುವರಿ
10. ಸಿದ್ದರಾಮಯ್ಯ ಮಠಪತಿ : ಹಮಾರೆ ಸಂಗೀತ ರತ್ನ
11. ಸೈಯದ ನೂರುತ್ವಾ ಜೆ.ಪಿ.ನಾಯಕ: ಭಾರತದಲ್ಲಿ ಶಿಕ್ಷಣ ಇತಿಹಾಸ